# ಮಾತೃ ಸಾನ್ನಿಧ್ಯದಲ್ಲಿ

**ಸ್ವಾಮಿ ನಿರ್ವಾಣಾನಂದ**

**"ಮಾಯೇರ್ ಪದಪ್ರಾಂತೇ" ಎಂಬ ಬಂಗಾಳಿ ಗ್ರಂಥದ ಒಂದು ಭಾಗವಿದು. ಇದನ್ನು ಅನುವಾದಿಸಿರುವ ಕುಮಾರಿ ಪಿ.ಉಷಾ ಅವರು ಕಾಶಿಯಲ್ಲಿರುವ ರಾಮಕೃಷ್ಣ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವರು.**

ಶ್ರೀಮಾತೆಯವರನ್ನು ನಾನು ಪ್ರಥಮ ಬಾರಿ ಕಂಡದ್ದು ಕಾಶಿಯ ಸೇವಾಶ್ರಮದಲ್ಲಿ. ಬಹುಶಃ ೧೯೧೩ರ ನವಂಬರ್ ತಿಂಗಳ ಘಟನೆ. ಕಾಳೀ ಪೂಜೆಯ ಮಾರನೆಯ ದಿನ (೮ನೇ ನವಂಬರ್ ೧೯೧೩). ಶ್ರೀಮಾತೆಯವರು ಸೇವಾಶ್ರಮಕ್ಕೆ ಆಗ ಮಿಸಿದ್ದರು. ನಾನು ರಾಮಕೃಷ್ಣ ಸಂಘಕ್ಕೆ ಸೇರುವ ಸಲುವಾಗಿ ಕೆಲದಿನಗಳ ಹಿಂದೆಯೇ ಸೇವಾಶ್ರಮಕ್ಕೆ ಬಂದಿದ್ದೆ. ಇಲ್ಲಿಗೆ ಬರುವುದಕ್ಕೆ ಮೊದಲೆ ಶ್ರೀರಾಮಕೃಷ್ಣ ಕಥಾಮೃತ (ಶ್ರೀರಾಮಕೃಷ್ಣ ವಚನವೇದ) ಹಾಗೂ ಇತರ ಮೂಲಗಳಿಂದ ಶ್ರೀಮಾತೆಯವರ ಬಗ್ಗೆ ತಿಳಿದುಕೊಂಡಿದ್ದೆ. ಮಹಾರಾಜ್‌ರೂ (ಸ್ವಾಮಿ ಬ್ರಹ್ಮಾನಂದರೂ) ಆಗ ಸೇವಾಶ್ರಮಕ್ಕೆ ಬಂದಿದ್ದರು. ಶ್ರೀಮಾತೆಯವರಾಗ ಅದ್ವೈತ ಆಶ್ರಮದ ಹತ್ತಿರದ ಬಾಗ್‌ಬಜಾರಿನ ಕಿರಣ್‌ಬಾಬುರವರ ಮನೆ "ಲಕ್ಷ್ಮೀನಿವಾಸ"ದಲ್ಲಿದ್ದರು. ಅಂದು ಶ್ರೀಮಾತೆಯವರು ಸೇವಾಶ್ರಮವನ್ನು ಸಂಪೂರ್ಣವಾಗಿ ಸುತ್ತಾಡಿ ನೋಡಿದ್ದರು. ಸೇವಾಶ್ರಮದ ಸಾಧುಗಳು ನಾರಾಯಣ ಸೇವೆಯೆಂದು ಬಗೆದು ರೋಗಿಗಳ ಸೇವೆಯನ್ನು ಮಾಡುತ್ತಿದ್ದುದನ್ನು ಕಂಡು ಶ್ರೀಮಾತೆಯವರು ಅತ್ಯಂತ ಸಂತೋಷಗೊಂಡಿದ್ದರು. "ಠಾಕೂರರು (ಶ್ರೀರಾಮಕೃಷ್ಣರು) ಇಲ್ಲಿ ಸ್ವಯಂ ವಿರಾಜಮಾನರಾಗಿರುವರು. ನನ್ನ ಪುತ್ರರು ಮನಃಪೂರ್ವಕವಾಗಿ ರೋಗಿಗಳ ಸೇವೆಯನ್ನು ಮಾಡುತ್ತ ಠಾಕೂರರನ್ನೇ ಪೂಜಿಸುತ್ತಿರುವರು," ಎಂದರು.

ಬಹಳ ಹೊತ್ತು ಸೇವಾಶ್ರಮದಲ್ಲಿ ಕಳೆದು ಶ್ರೀಮಾತೆಯವರು "ಲಕ್ಷ್ಮೀನಿವಾಸ"ಕ್ಕೆ ಹಿಂದಿರುಗಿದರು. ಸ್ವಲ್ಪ ಸಮಯದಲ್ಲೇ ಚಾರು ಮಹಾರಾಜರ (ಸ್ವಾಮಿ ಶುಭಾನಂದ) ಕೈಯಲ್ಲಿ ಹತ್ತು ರೂಪಾಯಿಯ ನೋಟೊಂದನ್ನು ಕಳುಹಿಸಿಕೊಟ್ಟರು. ಚಾರು ಮಹಾರಾಜರು ಆಶ್ರಮದಲ್ಲಿ ಪ್ರತಿಷ್ಠಿತರಾದವರಲ್ಲೊಬ್ಬರು. ಆಗವರಿನ್ನೂ ಸಾಧುಗಳಾಗಿರಲಿಲ್ಲ—ಚಾರುಬಾಬು, ಚಾರು ಚಂದ್ರದಾಸ್ ಎಂದು ಪರಿಚಿತರು. ಹಣವನ್ನು ತೆಗೆದುಕೊಂಡು ಬಂದ ಅವರೆಂದರು: "ಶ್ರೀಮಾತೆಯವರು ಸೇವಾಶ್ರಮದ ಕೆಲಸವನ್ನು ನೋಡಿ ಬಹಳ ಸಂತುಷ್ಟರಾಗಿ ಈ ಹಣವನ್ನು ಕಳುಹಿಸಿದ್ದಾರೆ. ಶ್ರೀಮಾತೆಯವರೆಂದರು: 'ಸೇವಾಶ್ರಮವನ್ನು ನೋಡಿ ನನಗೆ ಅತ್ಯಂತ ಸಂತೋಷವಾಯಿತು. ಇಲ್ಲಿಯೇ ಇದ್ದುಬಿಡೋಣವೆಂದೆನಿಸುತ್ತಿದೆ.'" ಈ ಮಾತುಗಳನ್ನು ಕೇಳಿ ಮಹಾರಾಜ್, ಮಹಾಪುರುಷ್ ಮಹಾರಾಜ್, ಹರಿ ಮಹಾರಾಜ್, ಕೇದಾರ ಬಾಬಾ (ಸ್ವಾಮಿ ಅಚಲಾನಂದರು), ಚಾರು ಮಹಾರಾಜ್ ಮುಂತಾದವರಿಗಾದ ಆನಂದ ಅಷ್ಟಿಷ್ಟಲ್ಲ! ಮಾಸ್ಟರ್ ಮಹಾಶಯರೂ (ಶ್ರೀರಾಮಕೃಷ್ಣ ಕಥಾಮೃತದ ಕರ್ತೃ ಮಹೇಂದ್ರನಾಥ ಗುಪ್ತ) ಆಗ ಕಾಶಿಯಲ್ಲಿದ್ದರು. ಸೇವಾಶ್ರಮದ ಕಾರ್ಯ ಅವರ ಮನಸ್ಸಿಗೆ ಅಷ್ಟೊಂದು ಒಪ್ಪಿಗೆಯಾಗಿರಲಿಲ್ಲ. ರೋಗಿಗಳ ಸೇವೆ, ಆಸ್ಪತ್ರೆಯನ್ನು ನಡೆಸುವುದು—ಇವೆಲ್ಲ ಸಾಧುಗಳ ಕೆಲಸವಲ್ಲ; ಇವೆಲ್ಲ ಠಾಕೂರರ ಭಾವಕ್ಕೂ ವಿರೋಧವಾದುವು; ಸಾಧುಗಳು ಸಾಧನೆ-ಭಜನೆಗಳನ್ನು ಮಾಡಿಕೊಂಡಿರಬೇಕು ಎಂಬುದು ಅವರ ಧೋರಣೆಯಾಗಿತ್ತು. ಶ್ರೀಮಾತೆಯವರ ಮಾತುಗಳು ಮತ್ತು ಅವರು ೧೦ ರೂಗಳನ್ನು ಕೊಟ್ಟ ವಿಷಯವನ್ನು ಉಲ್ಲೇಖಿಸುತ್ತ ಮಹಾರಾಜ್ ಮಾಸ್ಟರ್ ಮಹಾಶಯರಿಗೆಂದರು : "ಎಲ್ಲ ಕೇಳಿದಿರಲ್ಲಾ?" ಮಾಸ್ಟರ್ ಮಹಾಶಯರು ಹೇಳಿದರು : "ಶ್ರೀಮಾತೆಯವರು ಹೇಳಿದಮೇಲೆ ಇನ್ನೇನು! ಇವೆಲ್ಲ ಖಂಡಿತವಾಗಿಯೂ ಠಾಕೂರರ ಕಾರ್ಯಗಳು ಎಂಬುದನ್ನು ಒಪ್ಪದೆ ಬೇರೆ ದಾರಿಯಿದೆಯೇ?"

ಆ ಸಲ ಶ್ರೀಮಾತೆಯವರು ಅನೇಕ ದಿನಗಳು ಕಾಶಿಯಲ್ಲಿ ತಂಗಿದ್ದರು. ನಡುನಡುವೆ ಅದ್ವೈತ ಆಶ್ರಮಕ್ಕೂ ಸೇವಾಶ್ರಮಕ್ಕೂ ಹೋಗಿಬರುತ್ತಿದ್ದರು. ಮಹಾರಾಜರು ದಿನನಿತ್ಯವೂ ಬೆಳಗ್ಗೆ ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋಗುತ್ತಿದ್ದರು. ಕೆಲವೊಮ್ಮೆ ನಾವೂ ಅವರ ಜತೆಗೆ ಹೋಗುತ್ತಿದ್ದೆವು. ಆಗ ಶ್ರೀಮಾತೆಯವರೊಡನೆ ಹೆಚ್ಚು ಮಾತನಾಡುತ್ತಿರಲಿಲ್ಲವಾದರೂ ಅವರು ನನ್ನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರೆಂಬ ಅರಿವು ನನಗಾಗುತ್ತಿತ್ತು.

೧೯೧೪ ಡಿಸೆಂಬರ್ ತಿಂಗಳ ಕೊನೆಯಲ್ಲಿ ಮಹಾರಾಜರ ನಿರ್ದೇಶನದಂತೆ ಸೇವಾಶ್ರಮದಿಂದ ಬೇಲೂರು ಮಠಕ್ಕೆ ಬಂದೆ. ಶ್ರೀಮಾತೆಯವರಾಗ ಉದ್ಬೋಧನದಲ್ಲಿದ್ದರು. ಮಠಕ್ಕೆ ಬಂದ ಮೇಲೆ ಶ್ರೀಮಾತೆಯವರ ದರ್ಶನಕ್ಕಾಗಿ ಉದ್ಬೋಧನಕ್ಕೆ ಹೋದೆ. ಮಠಕ್ಕೆ ಬರುವ ಒಂದೆರಡು ತಿಂಗಳುಗಳ ಮೊದಲು ನೆರೆ ಪರಿಹಾರ ಕಾರ್ಯದಲ್ಲಿ ಭಾಗವಹಿಸಲು ಕಾಶಿಯಿಂದ ಪಶ್ಚಿಮ ಬಂಗಾಳಕ್ಕೆ ಬಂದಿದ್ದೆ. ತೀವ್ರ ಪರಿಶ್ರಮ ಹಾಗೂ ಅನಿಯಮಿತ ದಿನಚರಿಗಳ ಕಾರಣ ಆರೋಗ್ಯ ಸ್ವಲ್ಪ ಕೆಟ್ಟಿತ್ತೆಂದು ತೋರುತ್ತದೆ. ಇದು ಶ್ರೀಮಾತೆಯವರ ಕಣ್ಣಿಗೆ ಬೀಳದಿರಲಿಲ್ಲ. ನನ್ನನ್ನು ನೋಡಿಯೇ ಬಹಳ ಉದ್ವೇಗ-ವ್ಯಾಕುಲತೆಯಿಂದ ಅವರೆಂದರು: "ಇದೇನು, ನಿನ್ನ ಮುಖ ಹೀಗಾಗಿಬಿಟ್ಟಿದೆಯಲ್ಲ?" ನಾನೆಂದೆ: "ಕೆಲದಿನಗಳು ನೆರೆ ಪರಿಹಾರ ಕಾರ್ಯದಲ್ಲಿ ತೊಡಗಿದ್ದೆ. ಅಲ್ಲಿ ಸರಿಯಾಗಿ ಊಟ-ತಿಂಡಿಗಳ ವ್ಯವಸ್ಥೆಯಿರಲಿಲ್ಲ. ಆದ್ದರಿಂದ ದೇಹಾರೋಗ್ಯ ಸ್ವಲ್ಪ ಕೆಟ್ಟಿರಬಹುದು." "ಸ್ವಲ್ಪವೇನಲ್ಲ. ಶರೀರದ ಆರೋಗ್ಯ ಬಹಳಷ್ಟು ಕೆಟ್ಟಿದೆ. ಈಗ ಸ್ವಲ್ಪ ಚೆನ್ನಾಗಿ ತಿಂದುಂಡು ಆರೋಗ್ಯವನ್ನು

ಸುಧಾರಿಸಿಕೊ. ನಾವೆಲ್ಲ ಠಾಕೂರರ ಅನೇಕ ಕೆಲಸಗಳನ್ನು ಮಾಡಬೇಕಾಗಿದೆ. ಆರೋಗ್ಯವನ್ನು ಕಾಪಾಡಿಕೊಳ್ಳದಿದ್ದರೆ ಹೇಗಾಗುತ್ತದೆ?" ಎಂದರು ಶ್ರೀಮಾತೆಯವರು. ನಾನು ಮಠಕ್ಕೆ ಹಿಂದಿರುಗುವಾಗ ಅವರು ಮತ್ತೆ ಇದನ್ನು ಜ್ಞಾಪಿಸಿದರು.


ಶ್ರೀಮಾತೆಯವರು ತಮ್ಮ ೫೮ನೆ ವಯಸ್ಸಿನಲ್ಲಿ – ಜಯರಾಮಬಟಿಯಲ್ಲಿದ್ದಾಗ

ಆ ಸಲ ಮಠದಲ್ಲಿ ಕೆಲ ತಿಂಗಳುಗಳು ಮಹಾರಾಜರ ಸೇವೆಯಲ್ಲಿ ತೊಡಗಿದ್ದೆ. ಆಗ ಉತ್ತರಾಖಂಡಕ್ಕೆ ಹೋಗಿ ಕೆಲದಿನಗಳು ತಪಸ್ಸು ಮಾಡಬೇಕೆಂಬ ಪ್ರಬಲವಾದ ಆಸೆ ನನಗಾಯಿತು. ಶ್ರೀಮಾತೆಯವರು ಉದ್ಬೋಧನದಲ್ಲಿದ್ದರು. ಅಲ್ಲಿಗೆ ಹೋಗಿ ತಪಸ್ಸಿಗೆ ಹೋಗಲು ನನಗೆ ಅನುಮತಿ ನೀಡಬೇಕೆಂದು ಶ್ರೀಮಾತೆಯವರನ್ನು ಪ್ರಾರ್ಥಿಸಿದೆ. ಮೊದಲಿಗೆ ಅವರು ಸುತರಾಂ ಒಪ್ಪಲಿಲ್ಲ. ಕಳಕಳಿಯಿಂದ ಅವರೆಂದರು: "ಬೇಡಪ್ಪ, ನೀನಿನ್ನೂ ಚಿಕ್ಕವನು. ನೀನೀಗ ತಪಸ್ಸಿಗೆ ಹೋಗಿ ಪ್ರಯೋಜನವಿಲ್ಲ. ಅಲ್ಲಿ ನೀನು ಇರುವುದಾದರೂ ಎಲ್ಲಿ? ನಿನಗೆ ಎಲ್ಲಿಂದ ಊಟ ಸಿಗುತ್ತದೆ?" ನಾನೂ ಬಿಡುವವನಲ್ಲ. ಅನುಮತಿಯನ್ನು ಯಾಚಿಸುತ್ತಲೇ ಇದ್ದೆ. ಶ್ರೀಮಾತೆಯವರು ಮತ್ತೆ ಹೇಳಿದರು: "ಬೇಡಪ್ಪ, ನಿನಗೆ ಕಷ್ಟವಾಗುತ್ತದೆ. ತಪಸ್ಸಿಗೆ ಹೋಗುವ ಆವಶ್ಯಕತೆ ನಿನಗಿಲ್ಲಪ್ಪ." ಶ್ರೀಮಾತೆಯವರ ಕಾಳಜಿ ತೀವ್ರವಾಗಿತ್ತು. ಆದರೆ ನಾನು ಪಟ್ಟು ಹಿಡಿದೆ. ಅವರ ಅನುಮತಿಯನ್ನು ಮತ್ತೆ ಮತ್ತೆ ಬೇಡಿದೆ. ಕೊನೆಗೆ ಶ್ರೀಮಾತೆಯವರೆಂದರು : "ಆಗಲಪ್ಪ. ತಪಸ್ಸಿಗೆ ಹೋಗಲು ನೀನು ಇಷ್ಟೊಂದು ಕಾತರನಾಗಿರುವಾಗ ಹೋಗಪ್ಪ. ಆದರೆ ನಾನು ಹೇಳುವುದೆಂದರೆ ನೀನು ಕಾಶಿಗೆ ಹೋಗು. ಅಲ್ಲಿನ ಸೇವಾಶ್ರಮದಲ್ಲಿದ್ದುಕೊಂಡು ಹೊರಗೆ ಭಿಕ್ಷೆಗೆ ಹೋಗು. ಇನ್ನೆಲ್ಲಿಗೂ ಹೋಗಬೇಡ." ನಾನಾಗ ಶ್ರೀಮಾತೆಯವರಿಗೆಂದೆ: "ಅಮ್ಮಾ, ಹಾಗಾದರೆ ನಾನು ಕಾಶಿಗೆ ನಡೆದುಕೊಂಡು ಹೋಗುವೆ." ಮೊದಲು ಅವರು ಇದಕ್ಕೊಪ್ಪದಿದ್ದರೂ ನಂತರ ನನ್ನ ಬೇಡಿಕೆಗೆ ಒಪ್ಪಿದರು. ಬೀಳ್ಕೊಳ್ಳುವಾಗ ಶ್ರೀಮಾತೆಯವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸುತ್ತ ಹೇಳಿದರು: "ಪೂರ್ಣ ಆಶೀರ್ವಾದವನ್ನು ಮಾಡಿದ್ದೇನಪ್ಪ. ನೀನು ಸಿದ್ಧಿಯನ್ನು ಪಡೆಯುವಂತಾಗಲಿ." ೫-೬ ತಿಂಗಳುಗಳು ಕಳೆದಮೇಲೆ ಶ್ರೀಮಾತೆಯವರ ಆಶೀರ್ವಾದವನ್ನು ಹೊತ್ತು ಕಾಲ್ನಡಿಗೆಯಲ್ಲಿ ಕಾಶಿಗೆ ಹೊರಟೆ. ಆ ಬಾರಿ ೭-೮ ತಿಂಗಳುಗಳು ಕಾಶಿಯಲ್ಲಿದ್ದೆ. ಕಾಶಿಯಿಂದ ಮಠಕ್ಕೆ ಹಿಂದಿರುಗಿದ ಮೇಲೆ ಮತ್ತೆ ಮಹಾರಾಜರ ಸೇವೆಯಲ್ಲಿ ತೊಡಗಿದೆ.

ಮಹಾರಾಜರು ಬಲರಾಮ ಮಂದಿರದಲ್ಲಿ(ಶ್ರೀರಾಮಕೃಷ್ಣರ ಪ್ರಮುಖ ಭಕ್ತನಾದ ಬಲರಾಮಬೋಸ್‌ನ ಮನೆ. ಶ್ರೀರಾಮಕೃಷ್ಣರು ನೂರಾರು ಬಾರಿ ಹೋಗಿ ಅದನ್ನು ಪವಿತ್ರಗೊಳಿಸಿದ್ದರು) ಇರಲು ಬಹಳವೇ ಇಷ್ಟಪಡುತ್ತಿದ್ದರು. ಮಠದಿಂದ ಅವರು ಆಗಾಗ ಬಲರಾಮ ಮಂದಿರಕ್ಕೆ ಬರುತ್ತಿದ್ದರು. ನಾನು ಬಲರಾಮ ಮಂದಿರದಲ್ಲಿ ಮಹಾರಾಜರೊಂದಿಗಿದ್ದಾಗ ಆಗಾಗ ಉದ್ಬೋಧನಕ್ಕೆ ಹೋಗುತ್ತಿದ್ದೆ. ಆಗ ಶ್ರೀಮಾತೆಯವರಿಗೆ ಪ್ರಣಾಮ ಮಾಡುವ ಸೌಭಾಗ್ಯವು ಸಾಧಾರಣವಾಗಿ ಪ್ರತಿದಿನವೂ ದೊರೆಯುತ್ತಿದ್ದು ಅವರೊಂದಿಗೆ ಮಾತನಾಡುವ ಅವಕಾಶವೂ ಸಿಗುತ್ತಿತ್ತು. ಶ್ರೀಮಾತೆಯವರ ಧ್ವನಿ ಅತ್ಯಂತ ಮಧುರವಾಗಿತ್ತು. ಇತರರ ಮುಂದೆ ಸಾಮಾನ್ಯವಾಗಿ ಮುಸುಕು ಹಾಕಿಕೊಂಡಿರುತ್ತಿದ್ದರೂ ನಾನು ಅವರನ್ನೆಂದೂ ಆ ರೀತಿ ಕಂಡ ನೆನಪಿಲ್ಲ. ಶ್ರೀಮಾತೆಯವರನ್ನು ನೋಡಿದಾಗಲೆಲ್ಲ ಅವರ ಶ್ರೀಮುಖದ ದರ್ಶನ ಸೌಭಾಗ್ಯ ನನಗಾಗಿದೆ.

ಶ್ರೀಮಾತೆಯವರ ಅಂತಿಮ ಅನಾರೋಗ್ಯದ ಕಾಲದಲ್ಲಿ ಮಹಾರಾಜರು ಭುವನೇಶ್ವರದಲ್ಲಿದ್ದರು. ನಾನು ಅವರ ಸೇವೆಯಲ್ಲಿ ನಿರತನಾಗಿದ್ದೆ. ಶ್ರೀಮಾತೆಯವರ ಮಹಾಸಮಾಧಿಯಂದು (೨೧ ಜುಲೈ, ೧೯೨೦) ರಾತ್ರಿ ಸುಮಾರು ೧.೩೦ ಗಂಟೆಯ ಹೊತ್ತಿಗೆ ಮಹಾರಾಜರ ಕೋಣೆಯೊಳಗೆ ಹೋಗಿ ನೋಡಿದಾಗ ಅವರು ಉಣ್ಣೆಯ ಶಾಲೊಂದನ್ನು ಪೂರ್ತಿಯಾಗಿ ಹೊದ್ದುಕೊಂಡು ಆರಾಮಕುರ್ಚಿಯಲ್ಲಿ ಕುಳಿತಿದ್ದರು. ಮುಖವು ತುಂಬ ಗಂಭೀರವಾಗಿತ್ತು. ನನ್ನನ್ನು ನೋಡಿ ಮಹಾರಾಜರೆಂದರು, "ಸುಜ್ಜೂ, ರಾತ್ರಿ ಎಷ್ಟು ಸಮಯವಾಗಿದೆ? ಶ್ರೀಮಾತೆಯವರಿಗಾಗಿ ಮನಸ್ಸು ಏಕೋ ಚಡಪಡಿಸುತ್ತಿದೆ. ಅವರು ಹೇಗಿದ್ದಾರೊ?" ನಾನವರನ್ನು ಕೇಳಿದೆ,"ನೀವು ಮಲಗುವುದಿಲ್ಲವೆ?" ಮಹಾರಾಜರು ಯಾವ ಉತ್ತರವನ್ನೂ ಕೊಡಲಿಲ್ಲ. ಅವರ ಮುಖಭಾವವನ್ನು ನೋಡಿ ನನಗೆ ಮತ್ತೇನು ಕೇಳಲೂ ಧೈರ್ಯ ಬರಲಿಲ್ಲ. ನಿಧಾನವಾಗಿ ಅವರ ಕೋಣೆಯಿಂದ ಹೊರಬಂದೆ.

ಮಾರನೆಯ ದಿನ ಬೆಳಗ್ಗೆ ಮಹಾರಾಜರು ಸ್ವಲ್ಪ ಚಡಪಡಿಸುತ್ತಿರುವರೆಂದು ತೋರಿತು. ಇತರ ದಿನಗಳಂದು ಬೆಳಗ್ಗೆ ಸ್ವಲ್ಪ ವಿಹಾರಕ್ಕೆಂದು ಹೊರಡುತ್ತಿದ್ದರು. ಆ ದಿನ ಹೋಗಲಿಲ್ಲ. ಹೊರಗಿನ ಪಡಸಾಲೆಯಲ್ಲಿ ಓಡಾಡತೊಡಗಿದರು. ಅಂದೇ ಶರತ್ ಮಹಾರಾಜರಿಂದ (ಸ್ವಾಮಿ ಶಾರದಾನಂದರಿಂದ) ಟೆಲಿಗ್ರಾಂ ಬಂತು: "ಕಳೆದ ರಾತ್ರಿ ೧.೩೦ ಗಂಟೆಯ ಹೊತ್ತಿಗೆ ಉದ್ಬೋಧನದಲ್ಲಿ ಶ್ರೀಮಾತೆಯವರು ದೇಹತ್ಯಾಗ ಮಾಡಿರುವರು." ಸುದ್ದಿಯನ್ನು ಕೇಳಿ ಮಹಾರಾಜರ ಮುಖವು ಅವ್ಯಕ್ತ ವೇದನೆಯಿಂದ ತುಂಬಿತು. ಅವರು ಹೋಗಿ ಮಲಗಿದರು. ಸ್ವಲ್ಪ ಹೊತ್ತಿನ ನಂತರ ಮತ್ತೆ ಎದ್ದು ಕುಳಿತು ಹೇಳಿದರು: "ನಾನು ಹವಿಷ್ಯಾನ್ನ ಉಣ್ಣುತ್ತೇನೆ. ಶ್ರೀಮಾತೆಯವರ ಶಿಷ್ಯರೆಲ್ಲ ೩ ದಿನಗಳು ಹವಿಷ್ಯಾನ್ನವನ್ನು ಸೇವಿಸಬೇಕು, ಪಾದರಕ್ಷೆಗಳನ್ನು ತೊಡುವಂತಿಲ್ಲ." ಮಹಾರಾಜರು ಮೂರು ದಿನಗಳು ಯಾರೊಂದಿಗೂ ಮಾತನಾಡಲಿಲ್ಲ. ೧೨ ದಿನಗಳು ಹವಿಷ್ಯಾನ್ನವನ್ನು ಸೇವಿಸಿದರು, ಪಾದರಕ್ಷೆಗಳನ್ನು ಉಪಯೋಗಿಸಲಿಲ್ಲ. ಒಂದು ದಿನ ಹೇಳಿದರು: "ಇಷ್ಟು ದಿನಗಳು ಬೆಟ್ಟದ ನೆರಳಿನಲ್ಲಿದ್ದೆ."

ಸತಿಯ ಶರೀರದ ಒಂದೊಂದು ಅಂಗವನ್ನೂ ಎದೆಯಲ್ಲಿರಿಸಿಕೊಂಡು ಇಡೀ ದೇಶದಲ್ಲಿ ೫೧ ಶಕ್ತಿಪೀಠಗಳಾಗಿವೆ. ಅದೇ ಸತಿಯ ಶರೀರವು ಇಂದು ಬೇಲೂರು ಮಠದ ಮಣ್ಣಿನಲ್ಲಿ ಬೆರೆತಿದೆ, ಎಂದರೆ ಬೇಲೂರು ಮಠ ಅದೆಷ್ಟು ಮಹಾನ್ ತೀರ್ಥವೆಂದು ತಿಳಿದುನೋಡಿ!
— ಮಹಾಪುರುಷ್ ಮಹಾರಾಜ್
(ಸ್ವಾಮಿ ಶಿವಾನಂದ)

ಶ್ರೀಮಾತೆಯವರ ಶರೀರ ದಹನವಾದ ಬಳಿಕ ಮಹಾಪುರುಷ್ ಮಹಾರಾಜರು ಉಪಸ್ಥಿತರಿದ್ದ ಸಾಧು ಹಾಗೂ ಭಕ್ತರನ್ನುದ್ದೇಶಿಸಿ, "ಸತಿಯ ಶರೀರದ ಒಂದೊಂದು ಅಂಗವನ್ನೂ ಎದೆಯಲ್ಲಿರಿಸಿಕೊಂಡು ಇಡೀ ದೇಶದಲ್ಲಿ ೫೧ ಶಕ್ತಿಪೀಠಗಳಾಗಿವೆ. ಅದೇ ಸತಿಯ ಪೂರ್ಣ ಶರೀರವು ಇಂದು ಬೇಲೂರು ಮಠದ ಮಣ್ಣಿನಲ್ಲಿ ಬೆರೆತಿದೆ, ಎಂದರೆ ಬೇಲೂರು ಮಠ ಅದೆಷ್ಟು ಮಹಾನ್ ತೀರ್ಥವೆಂದು ತಿಳಿದುನೋಡಿ!" ಎಂದರಂತೆ.

ಮಠದ ಗಂಗಾತೀರದಲ್ಲಿರುವ ಮೂರು ಮಂದಿರಗಳಲ್ಲಿ (ರಾಜಾ ಮಹಾರಾಜರ ಮಂದಿರ, ಶ್ರೀಮಾತೆಯವರ ಮಂದಿರ ಹಾಗೂ ಸ್ವಾಮೀಜಿಯವರ ಮಂದಿರ) ಶ್ರೀಮಾತೆ ಯವರ ಮಂದಿರವು ಗಂಗೆಯ ಕಡೆ ಮುಖ ವಿರಿಸಿದೆ—ಬೇರೆಯವುಗಳಿಗಿಂತ ಭಿನ್ನ. ಶ್ರೀಮಾತೆಯವರಿಗೆ ಗಂಗೆಯೆಂದರೆ ಎಲ್ಲಿಲ್ಲದ ಪ್ರೀತಿ. ಗಂಗಾ ಸ್ನಾನವನ್ನು ಮಾಡುತ್ತಿದ್ದರು, ಗಂಗಾ ದರ್ಶನವನ್ನು ಮಾಡುತ್ತಿದ್ದರು, ಹಾಗೂ ಗಂಗಾತೀರದಲ್ಲಿರಲು ಇಷ್ಟಪಡುತ್ತಿದ್ದರು. ಆದುದರಿಂದಲೇ ಅವರ ಮಂದಿರವು ಗಂಗೆಯ ಕಡೆ ಮುಖ ಮಾಡಿರುವುದು. ಶ್ರೀಮಾತೆಯವರು ಸದಾ ಕಾಲ ಗಂಗಾದರ್ಶನವನ್ನು ಮಾಡುತ್ತಿರುವರು.

ಮಹಾರಾಜರೆನ್ನುತ್ತಿದ್ದರು: "ಶ್ರೀಮಾತೆಯವರನ್ನು ಗುರುತಿಸುವುದು ಬಹಳ ಕಠಿಣ. ಮುಸುಕು ಹಾಕಿಕೊಂಡು ಸಾಮಾನ್ಯ ಮಹಿಳೆಯಂತಿರುತ್ತಾರೆ, ಆದರೆ ಆಕೆ ಸಾಕ್ಷಾತ್ ಜಗದಂಬಾ. ಠಾಕೂರರು ತೋರಿಸಿಕೊಡದಿದ್ದರೆ ನಮಗಾದರೋ ಆಕೆಯನ್ನು ಗುರುತಿಸಲಾಗುತ್ತಿತ್ತೇನು?" ಭಕ್ತರೊಬ್ಬರು ನನಗೊಮ್ಮೆ ಹೇಳಿದ್ದರು, ಶ್ರೀಮಾತೆಯವರು ತಾವೇ ಅವರಿಗೊಮ್ಮೆ ಹೇಳಿದ್ದರಂತೆ: "ನಾನೇ ಸೀತೆ."

*

ಶ್ರೀಮಾತೆಯವರೊಡನೆ ವಾಸಿಸುವ ಅಪೂರ್ವ ಭಾಗ್ಯಶಾಲಿಗಳಿಗೆ ಧರ್ಮವೆಂಬುದು ಮಧುರ ಸ್ವಾಭಾವಿಕ ಆನಂದದ ವಿಷಯ; ಪವಿತ್ರತೆ ಮತ್ತು ಧಾರ್ಮಿಕತೆ ಇವು ಸ್ಪರ್ಶವೇದ್ಯ ಸತ್ಯಗಳು; ದಿವ್ಯತೆಯ ಗಂಧ ನಿಜವಾಗಿಯೂ ಪ್ರಾಪಂಚಿಕ ದುರ್ಗಂಧವನ್ನು ನಾಶಮಾಡುವ ಮಧುರ ಸುವಾಸನೆ ಎಂಬುದು ತಿಳಿದುಬರುವುದು. ದಯೆ, ಭಕ್ತಿ, ಭಗವನ್ಮಿಲನ—ಇವು ಅವರ ಸ್ವಭಾವವೇ ಆಗಿದ್ದವು, ಅವರು ಇವುಗಳನ್ನು ಹೊಂದಿದ್ದರೆಂದು ಹೇಳುವಂತಿರಲಿಲ್ಲ. ಶಾಂತಿಪ್ರದ ಆಶೀರ್ವಾದಣೆಯಿಂದಾಗಲಿ, ಸ್ಪರ್ಶದಿಂದಾಗಲಿ ಇವುಗಳ ಇರುವಿಕೆಯನ್ನು ಅರಿಯಬಹುದಿತ್ತು.

ಬಾಹ್ಯ ವರ್ತನೆಯನ್ನು ನೋಡಿದರೆ ಅವರಲ್ಲಿ ಯಾವ ವೈಶಿಷ್ಟ್ಯವನ್ನೂ ಕಾಣುವಂತಿರಲಿಲ್ಲ. ಆದರೆ ಆ ಸರಳತೆಯ ಮುಸುಕಿನ ಹಿಂದೆ ಇದ್ದ ಮಹೋನ್ನತ ಧೀರ ಗಂಭೀರ ಉದಾತ್ತ ವ್ಯಕ್ತಿತ್ವ ನಮ್ಮ ಹೃದಯವನ್ನು ಸೆಳೆದು ಅವರ ಮುಂದೆ ಭಕ್ತಿಪೂರ್ವಕವಾಗಿ ತಲೆತಗ್ಗಿಸುವಂತೆ ಮಾಡುತ್ತಿತ್ತು. ಒಳಗಿನ ದಿವ್ಯಪ್ರಜ್ಞೆಯ ಕಾಂತಿಯನ್ನು ಮರೆಮಾಡಲು ಆ ಮಾನವೀಯ ಮುಸುಕು ಅಸಮರ್ಥವಾಗಿತ್ತು. ಅವರು ಉಪನ್ಯಾಸ ಮಾಡಲಿಲ್ಲ, ಉದ್ದುದ್ದ ಉಪದೇಶ ನೀಡಲಿಲ್ಲ. ಅವರ ಬದುಕೇ ಒಂದು ಉಪದೇಶ. ಆ ಪವಿತ್ರ ಜೀವನಗಂಗೆಯಲ್ಲಿ ಮಿಂದು ತಮ್ಮ ಜೀವನವನ್ನು ಪಾವನಗೊಳಿಸಿಕೊಂಡವರು ಅದೆಷ್ಟು ಮಂದಿ!

ಇಂಥ ಜೀವಿಗಳು ಸರೋವರ ಅಥವಾ ನದಿ ಇದ್ದಂತೆ. ಸೂರ್ಯ ಅದರ ನೀರನ್ನು ಮೇಲೆಳೆಯಬಹುದು, ಆದರೆ ಅದು ಮತ್ತೆ ಭೂಮಿಯನ್ನು ತುಂಬಿ ಹಸನುಗೊಳಿಸುವುದು. ಹಾಗೆಯೆ ಇಂತಹ ಸಂತಪುರುಷರು ದೈಹಿಕವಾಗಿ ಮೇಲೇರಿ ನಮ್ಮ ಕಣ್ಮರೆಯಾಗಬಹುದು, ಆದರೆ ಅವರ ಪ್ರಭಾವ ನಮ್ಮ ಮೇಲೆ ಬಿದ್ದು ನಮ್ಮ ದುರ್ಬಲ ಹೃದಯಕ್ಕೆ ನವಚೇತನವನ್ನು ನೀಡುವುದು, ಹೊಸ ಆಧ್ಯಾತ್ಮಿಕ ಜೀವನವನ್ನು, ಹೊಸ ಆದರ್ಶದ ಶಕ್ತಿಯನ್ನು ನೀಡುವುದು. — *ಸೋದರಿ ದೇವಮಾತಾ*